**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್ ವ್ಹಿ. ಸಂಕನೂರ, ಶ್ರೀ ಶಶೀಲ್ .ಜಿ ನಮೋಶಿ ಮತ್ತು ಶ್ರೀ ಹಣಮಂತ್ ರುದ್ರಪ್ಪ ನಿರಾಣಿ ಇವರು ಮಂಡಿಸಿರುವ ನಿಯಮ 330 ರ ಮೇರೆಗೆ ಗಮನ ಸೆಳೆಯುವ ಸೂಚನೆಗೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಹೇಳಿಕೆ:**

* * *

ವಿಷಯ:- ರಾಜ್ಯದಲ್ಲಿರುವ ಅನುದಾನಿತ ಸಂಯುಕ್ತ ಪದವಿ ಕಾಲೇಜುಗಳಿಂದ ಬೇರ್ಪಟ್ಟ ಪದವಿ ಪೂರ್ವ ಕಾಲೇಜುಗಳಲ್ಲಿ ಅನೇಕ ಕಾರಣಗಳಿಂದ ಬೋಧಕ ಹುದ್ದೆಗಳು ಖಾಲಿ ಇರುವುದರಿಂದ ಸದರಿ ಕಾಲೇಜುಗಳನ್ನು ನಡೆಸುವಲ್ಲಿ ಮತ್ತು ಸಮರ್ಪಕವಾಗಿ ಬೋಧನ ಕಾರ್ಯ ಮಾಡಲು ತೊಂದರೆ ಆಗಿರುವ ವಿಷಯವನ್ನು ಪ್ರಸ್ತಾಪಿಸುವುದು.

**ಉತ್ತರ:**

- ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದ 164 ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿನ ಪದವಿ ಪೂರ್ವ ತರಗತಿಗಳನ್ನು ಕಾಲೇಜು ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ಕಾಶಿಇ:99:ಇತರೇ ಆಡಳಿತ:2001 ದಿನಾಂಕ: 09-05-2001 ರಲ್ಲಿ ಪದವಿಯಿಂದ ವಿಭಜಿತ ಪದವಿ ಪೂರ್ವ ಕಾಲೇಜುಗಳನ್ನಾಗಿ ವಿಭಜಿಸಿ ಆದೇಶಿಸಲಾಗಿದೆ. ಸದರಿ ಆದೇಶವು 2001-02 ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬಂದಿರುತ್ತದೆ. ನಂತರದ ದಿನಗಳಲ್ಲಿ ಪದವಿ ಮತ್ತು ಪದವಿ ಪೂರ್ವ ಕಾಲೇಜುಗಳು ಒಟ್ಟಿಗೆ ನಡೆಯುತ್ತಿದ್ದ ಸಂದರ್ಭದಲ್ಲಿ ಸಹಾಯಾನುದಾನಕ್ಕೆ ಒಳಪಟ್ಟಿದ್ದು ಬೇರ್ಪಟ್ಟ ನಂತರ ಪದವಿ ತರಗತಿಗಳಲ್ಲಿ ಮತ್ತು ಪದವಿ ಪೂರ್ವ ತರಗತಿಗಳಲ್ಲಿ ಮಂಜೂರಾಗಿರುವ ವಿಭಾಗಗಳಿಗನುಗುಣವಾಗಿ ಹುದ್ದೆಗಳನ್ನು ಹಂಚಿಕೆ ಮಾಡಲು ಕಾಲೇಜು ಶಿಕ್ಷಣ ಇಲಾಖೆಯು ಪದವಿ ಕಾಲೇಜಿನಲ್ಲಿ ತೆರವಾಗಿರುವ / ಖಾಲಿ ಇರುವ ಹುದ್ದೆಗಳಲ್ಲಿ ಪದವಿ ವಿಭಾಗಕ್ಕೆ ಅಗತ್ಯ ಇರುವ ಹುದ್ದೆಗಳನ್ನು ತನ್ನಲ್ಲಿಯೇ ಉಳಿಸಿಕೊಂಡು ಉಳಿದ ಹುದ್ದೆಗಳನ್ನು ಮಾತ್ರ 164 ಕಾಲೇಜುಗಳ ಪೈಕಿ ಸಂಬಂಧಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಕಾಲೇಜುಗಳಿಗೆ ಹಸ್ತಾಂತರಿಸಿರುತ್ತದೆ.
- ಈ ರೀತಿ ಕಾಲೇಜು ಶಿಕ್ಷಣ ಇಲಾಖೆಯಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಿದ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರದಿಂದ ಆಡಳಿತಾತ್ಮಕ ಅನುಮತಿ ಪಡೆದು ಹುದ್ದೆಗಳ ಭರ್ತಿಗೆ ನಿಯಮಾನುಸಾರ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದಿಂದ ಕ್ರಮವಹಿಸಲಾಗುತ್ತಿದೆ.
- ರಾಜ್ಯದಲ್ಲಿ ಪ್ರಸ್ತುತ ಕಾಲೇಜು ಶಿಕ್ಷಣ ಇಲಾಖೆಯಿಂದ ಬೇರ್ಪಟ್ಟ 164 ಪದವಿ ಪೂರ್ವ ಕಾಲೇಜುಗಳ ಪೈಕಿ 156 ಪದವಿ ಪೂರ್ವ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.
- ಖಾಸಗಿ ಅನುದಾನಿತ ಪದವಿ ವಿಭಜಿತ ಪದವಿ ಪೂರ್ವ ಕಾಲೇಜುಗಳಿಂದ ಹಸ್ತಾಂತರಗೊಂಡಿರುವ 741 ಹುದ್ದೆಗಳ ಪೈಕಿ ಸರ್ಕಾರವು ಕಾರ್ಯಭಾರ ಹೊಂದಿರುವ 544 ಹುದ್ದೆಗಳನ್ನು ಭರ್ತಿ ಮಾಡಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಅನುಮತಿಸಿದ ಹುದ್ದೆಗಳ ಪೈಕಿ 448 ಹುದ್ದೆಗಳನ್ನು ಭರ್ತಿ ಮಾಡಿದೆ. ಉಳಿದಂತಹ ಹುದ್ದೆಗಳಿಗೆ ಸಂಬಂಧಿಸಿದಂತೆ ಆಡಳಿತ ಮಂಡಳಿಯಿಂದ ಹುದ್ದೆ ಭರ್ತಿ ಸಂಬಂಧ ಇಲಾಖೆಗೆ ಸಲ್ಲಿತವಾಗುತ್ತಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅರ್ಹ ಹುದ್ದೆಗಳಿಗೆ ಅನುಮೋದನೆ ನೀಡಲಾಗುತ್ತಿದೆ. ಉಳಿದಂತೆ 96 ಹುದ್ದೆಗಳಲ್ಲಿ ನಿಗಧಿತ ಕಾರ್ಯಭಾರ, ವಿದ್ಯಾರ್ಥಿಗಳ ದಾಖಲಾತಿ ಹಾಗೂ ಇನ್ನಿತರೆ ಮಾನದಂಡ ಪೂರೈಸಿರುವ ಬಗ್ಗೆ ಖಚಿತಪಡಿಸಿಕೊಂಡು ಆಡಳಿತ ಮಂಡಳಿಗಳು ಪ್ರಸ್ತಾವನೆಯನ್ನು ಸಲ್ಲಿಸಬೇಕಿದ್ದು, ಆದರೆ ಈವರೆಗೂ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ. ಇಂತಹ ಪ್ರಸ್ತಾವನೆಗಳು ಸ್ವೀಕೃತವಾದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಸಂಖ್ಯೆ: ಇಪಿ 274 ಡಿಜಿಡಬ್ಲ್ಯೂ 2025